ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 551 (499)
2. ಸದಸ್ಯರ ಹೆಸರು : ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 10-03-2020
4. ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ಕೈಗೊಂಡಿರುವ ಪಟ್ಟಣಕ್ಕೆ ಕೊಳವೆ ನೀರು ಸರಬರಾಜು ಯೋಜನೆ ಸಧ್ಯ ಯಾವ ಹಂತದಲ್ಲಿದೆ:	**ಕೆ.ಯು.ಐ.ಡಿ.ಎಫ್.ಸಿ** ವತಿಯಿಂದ ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣ (ಕೆ.ಎಂ.ಆರ್.ಪಿ)ಯ ಪೌರಬಂಡವಾಳ ಹೂಡಿಕೆ ಘಟಕದಡಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಪುರಸಭೆ ವ್ಯಾಪ್ತಿಯಲ್ಲಿ 2014-15 ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ: • 24/7 ನೀರು ಸರಬರಾಜು • ಎಕ್ಸ್‌ಪ್ರೆಸ್ ಫಿಡರ್ ಮೈನ್ ಕಾಮಗಾರಿ ಮೇಲಿನ ಎರಡು ಕಾಮಗಾರಿಗಳು ದಿ:31.5.2017 ರಂದು ಪೂರ್ಣಗೊಂಡಿರುತ್ತದೆ. 24/7 ನೀರು ಸರಬರಾಜು ಕಾಮಗಾರಿಯ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿಯ 5 ವರ್ಷಗಳಾಗಿದ್ದು, ಅದರಲ್ಲಿ 3 ವರ್ಷಗಳು ಮುಕ್ತಾಯಗೊಂಡಿರುತ್ತದೆ. ಇನ್ನು 2 ವರ್ಷಗಳು ಬಾಕಿಯಿರುತ್ತದೆ. **ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ** ವತಿಯಿಂದ: ಪ್ರಸ್ತುತ ಕಾರವಾರ ಜಿಲ್ಲೆಯ ಹಳಿಯಾಳ ಪಟ್ಟಣಕ್ಕೆ ಮಂಡಳಿ ವತಿಯಿಂದ ಯಾವುದೇ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ. ಕಾರವಾರ ಜಿಲ್ಲೆಯ ಹಳಿಯಾಳ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ. ನಅಇ 43 ಯು.ಡಿ.ಎಸ್ 2015, ದಿ:06-12-2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾಮಗಾರಿಗಳನ್ನು ದಿ:09-07-2019 ರಂದು ಪ್ರಾರಂಭಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಆ)	ಸದರಿ ಯೋಜನೆ ಶಂಕು ಸ್ಥಾಪನೆಯಾಗಿದ್ದು, ಯಾವಾಗ;	**ಕೆ.ಯು.ಐ.ಡಿ.ಎಫ್.ಸಿ** ವತಿಯಿಂದ ಯೋಜನೆಯ ಶಂಕು ಸ್ಥಾಪನೆಯು ದಿನಾಂಕ:14.5.2014 ರಂದು ಆಗಿರುತ್ತದೆ. **ಕೆ.ಯು.ಡಬ್ಲ್ಯೂ..ಎಸ್& ಡಿ.ಬಿ** ವತಿಯಿಂದ: ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಗೆ ದಿನಾಂಕ:07-12-2017 ರಂದು ಶಂಕು ಸ್ಥಾಪನೆಯಾಗಿರುತ್ತದೆ.
ಇ)	ಈ ಯೋಜನೆಗಾಗಿ ಕಾಯ್ದಿರಿಸಲಾದ ಒಟ್ಟು ಅನುದಾನ ಎಷ್ಟು;	**ಕೆ.ಯು.ಐ.ಡಿ.ಎಫ್.ಸಿ** ವತಿಯಿಂದ 24/7 ನೀರು ಸರಬರಾಜು ಕಾಮಗಾರಿ ಗುತ್ತಿಗೆ ಮೊತ್ತ ರೂ.17.05 ಕೋಟಿಗಳು. ಎಕ್ಸಪ್ರೆಸ್ ಫಿಡರ್ ಮೈನ್ ಕಾಮಗಾರಿ ಗುತ್ತಿಗೆ ಮೊತ್ತ ರೂ.2.12 ಕೋಟಿಗಳು. **ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ** ವತಿಯಿಂದ: ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಯನ್ನು ರೂ.76.20 ಕೋಟಿಗಳಲ್ಲಿ ಕೈಗೊಳ್ಳಲಾಗಿದ್ದು, ಯೋಜನೆ ಆರ್ಥಿಕ ಮಾದರಿ ಕೆಳಕಂಡಂತಿದೆ; (ರೂ. ಕೋಟಿಗಳಲ್ಲಿ) ಕರ್ನಾಟಕ ಸರ್ಕಾರದ ಅನುದಾನ (ಶೇ.75) — 57.15 ಆರ್ಥಿಕ ಸಂಸ್ಥೆಯ ಸಾಲ (ಶೇ.20) — 15.24 ಸ್ಥಳೀಯ ಸಂಸ್ಥೆಯ ಪಾಲು (ಶೇ.5) — 3.81 **ಒಟ್ಟು** — 76.20 2019-20 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ರೂ.1000.00 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿದೆ.
ಈ)	ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು ಯಾವಾಗ;	**ಕೆ.ಯು.ಐ.ಡಿ.ಎಫ್.ಸಿ** ವತಿಯಿಂದ ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ: 13.5.2009 ರಂದು ನೀಡಲಾಗಿರುತ್ತದೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ದಿನಾಂಕ: 17.10.2011 ರಂದು ನೀಡಲಾಗಿರುತ್ತದೆ. **ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ** ವತಿಯಿಂದ ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ. ನಅಇ 43 ಯುಡಿಎಸ್ 2015, ದಿನಾಂಕ: 06-12-2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಆದೇಶ ದಿನಾಂಕ:14-11-2018 ರಲ್ಲಿ ತಾಂತ್ರಿಕ ಅನುಮೋದನೆ ನೀಡಲಾಗಿದೆ.

ಉ)	ಗುತ್ತಿಗೆಯನ್ನು ಯಾವ ಏಜೆನ್ಸಿಗೆ ನೀಡಲಾಗಿದೆ; ಮತ್ತು ಗುತ್ತಿಗೆ ಕರಾರಿನನ್ವಯ ಕಾಮಗಾರಿಯನ್ನು ಯಾವ ಅವಧಿಯೊಳಗೆ ಮುಕ್ತಾಯಗೊಳಿಸಲು ಸೂಚಿಸಲಾಗಿತ್ತು?	**ಕೆ.ಯು.ಐ.ಡಿ.ಎಫ್.ಸಿ** ವತಿಯಿಂದ 24/7 ನೀರು ಸರಬರಾಜು ಕಾಮಗಾರಿಯ ಗುತ್ತಿಗೆಯನ್ನು ಮೆಃಜೈನ್ ಇರಿಗೇಷನ್ ಸಿಸ್ಟಮ್ ಲಿ. ಜಲಗಾವ ರವರಿಗೆ ನೀಡಲಾಗಿರುತ್ತದೆ. ಗುತ್ತಿಗೆ ಕರಾರಿನನ್ವಯ ಕಾಮಗಾರಿಯು ದಿನಾಂಕ: 14.5.2015 ರಂದು ಪೂರ್ಣಗೊಳ್ಳಬೇಕಾಗಿತ್ತು, ಆದರೆ ಕಾಲಾವಧಿ ವಿಸ್ತರಣೆಯೊಂದಿಗೆ ದಿನಾಂಕ: 31.5.2017 ರಂದು ಪೂರ್ಣಗೊಂಡಿರುತ್ತದೆ. ಎಕ್ಸಪ್ರೆಸ್ ಫಿಡರ್ ಮೈನ್ ಕಾಮಗಾರಿಯ ಗುತ್ತಿಗೆಯನ್ನು ಮೆಃಪ್ರವೀಣ್ ಇಲೆಕ್ಟ್ರಿಕಲ್ಸ್ ರವರಿಗೆ ನೀಡಲಾಗಿರುತ್ತದೆ. ಗುತ್ತಿಗೆ ಕರಾರಿನನ್ವಯ ಕಾಮಗಾರಿಯು ದಿನಾಂಕ: 18.9.2015 ರಂದು ಪೂರ್ಣಗೊಳ್ಳಬೇಕಾಗಿತ್ತು, ಆದರೆ ಕಾಲಾವಧಿ ವಿಸ್ತರಣೆಯೊಂದಿಗೆ ದಿನಾಂಕ: 29.2.2016 ರಂದು ಪೂರ್ಣಗೊಂಡಿರುತ್ತದೆ. **ಕೆ.ಯು.ಡಬ್ಲ್ಯೂ.ಎಸ್ & ಡಿ.ಬಿ** ವತಿಯಿಂದ ಹಳಿಯಾಳ ಪಟ್ಟಣದ ಒಳಚರಂಡಿ ಯೋಜನೆಯ ಕಾಮಗಾರಿಗಳನ್ನು ಟೆಂಡರ್ ಆಧಾರದಲ್ಲಿ ಮೆ॥ ಸುಪ್ರದಾ ಕನ್ಸ್‌ಸ್ಟ್ರಕ್ಷನ್ಸ್ ಪ್ರೈ. ಲಿ., ಧಾರವಾಡ, ಇವರಿಗೆ ಕರಾರು ಒಪ್ಪಂದದ ಸಂಖ್ಯೆ:06/2019-20 ದಿನಾಂಕ:6-7-2019 ರಲ್ಲಿ ವಹಿಸಲಾಗಿದೆ. ಗುತ್ತಿಗೆ ಕರಾರು ಒಪ್ಪಂದದ ಪ್ರಕಾರ, ಯೋಜನೆ ಕಾಮಗಾರಿಯನ್ನು 36 ತಿಂಗಳುಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ.

ಕಡತ ಸಂಖ್ಯೆ : ನಅಇ 72 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.